**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆಃ 235 /2023**

**ಸಾಕ್ಷಿಯನ್ನು ದಿಃ 27.10.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಪ್ರಶಾಂತರಾಜೇಂದ್ರ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಫಿಲಿಪ್ ಎಂ | | |
| ವಯಸ್ಸು | 19 ವರ್ಷ | | |
| ಕೆಲಸ | ವಿದ್ಯಾರ್ಥಿ | | |
| ವಾಸಸ್ಥಳ | ಉದಯನಗರ ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಚಾಸಾ–1 ನನ್ನ ಅಜ್ಜಿ. ಚಾಸಾ–2 ನನ್ನ ತಾಯಿ. ಚಾಸಾ–4 ನನ್ನ ತಂದೆ. ಚಾಸಾ–5 ಮತ್ತು 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ದಿಃ 31.01.2023 ರಂದು ರಾತ್ರಿ 10.00 ಗಂಟೆಗೆ ನಾನು ಮನೆಯಲ್ಲಿ ಊಟ ಮಾಡಿಕೊಂಡು ವಾಕಿಂಗ್ ಮಾಡುವ ಸಲುವಾಗಿ ಮನೆಯಿಂದ ಹೊರಗೆ ಬಂದೆ. ರಾತ್ರಿ 10.05ಕ್ಕೆ ನಾನು ವಾಕಿಂಗ್ ಮಾಡುತ್ತಿದ್ದಾಗ, ಆರೋಪಿ ಆಕ್ಟಿವಾ ಸ್ಕೂಟಿ ವಾಹನದಲ್ಲಿ ನನಗೆ ಗುದ್ದಿಸುವ ರೀತಿಯಲ್ಲಿ ಜೋರಾಗಿ ಬಂದರು. ಆಗ ನಾನು ಕಿರುಚಿಕೊಂಡೆ. ಆಗ ಚಾಸಾ–2 ಮನೆಯಿಂದ ಹೊರಗೆ ಬಂದರು. ಚಾಸಾ–2 ರವರು ಆರೋಪಿಯನ್ನು ಉದ್ದೇಶಿಸಿ ಯಾಕೆ ಹೀಗೆ ಮಾಡುತ್ತಿದ್ದಿಯಾ ಎಂದು ಪ್ರಶ್ನೆ ಮಾಡಿದರು. ಆಗ ಆರೋಪಿ ಚಾಸಾ–2 ರವರನ್ನು ಉದ್ದೇಶಿಸಿ ಲೋಫರ್ ಮುಂಡೆ ಎಂದು ಬೈದ. ಆಗ ಚಾಸಾ–4 ರವರು ಬಂದರು. ಅವರು ಬಂದು ಆರೋಪಿಯನ್ನು ಯಾಕೆ ಹೀಗೆ ಮಾಡುತ್ತಿದ್ದಿಯಾ ಎಂದು ಕೇಳಿದಾಗ, ಆರೋಪಿ ಚಾಸಾ–4 ರವರಿಗೆ ಬೈದರು. ಆರೋಪಿ ಚಾಸಾ–4 ರವರಿಗೆ ಕೈಗಳಿಂದ ಬೆನ್ನಿಗೆ, ಕೈ ಕಾಲಿಗೆ ಹೊಡೆದರು. ಆಗ ಚಾಸಾ–2 ರವರು ಬಿಡಿಸಲು ಬಂದರು. ಆಗ ಆರೋಪಿಯು ಚಾಸಾ–2 ರವರ ಬಟ್ಟೆ ಹರಿದು ಹಾಕಿ ಅವಮಾನ ಮಾಡಲು ನೋಡಿದರು. ಆಗ ಚಾಸಾ–1 ರವರು ಚಾಸಾ–2 ರವರಿಗೆ ಬಟ್ಟೆ ಸರಿಮಾಡಲು ಬಂದಾಗ ಚಾಸಾ–1 ರವರಿಗೆ ಆರೋಪಿಯು

ಪೆನ್ನಿನಿಂದ ಬಲಕೈನ ಮುಂಗೈಗೆ ಚುಚ್ಚಿದ. ಆಗ ಚಾಸಾ-5 ರವರು ಬಂದ ಗಲಾಟೆಯನ್ನು ಬಿಡಿಸಿದರು. ಆಗ ಆರೋಪಿಯು ನಮ್ಮನ್ನು ಉದ್ದೇಶಿಸಿ ಇನ್ನೊಂದು ಸಾರಿ ನನ್ನ ತಂಟೆಗೆ ಬಂದರೆ ಎಲ್ಲರನ್ನು ಸಾಯಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿದ. ಚಾಸಾ-1, 2 ಮತ್ತು 4 ರವರು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಹೋದರು. ಈ ಹೇಳಿಕೆಯನ್ನು ನಾನು ಪೋಲೀಸ್ ಠಾಣೆಯಲ್ಲಿ ನೀಡಿದ್ದೇನೆ. ಚಾಸಾ-1 ರರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಪೆನ್ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-3ರ ಪೆನ್ನನ್ನು ನೋಡಿ ಗುರುತಿಸುತ್ತಾರೆ. ಆ ದಿನ ನಮ್ಮ ಜೊತೆ ಜಗಳ ಮಾಡಿ ಹಲ್ಲೆ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತಾತರೆ. ಆ ದಿನ ನನ್ನ ತಾಯಿ ಧರಿಸಿದ್ದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-2ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ VSD ಪರ ಶ್ರೀ. ಎಂ.ಕೆ.ಎಸ್ ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.